**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**- 143/2024 **PW**-1

**ದಿಃ 16.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಕೆ ವಕೀಲರಿಂದಃ**

ನಾನು ಬಿ ಎಸ್ ಸ್ಸಿ ಪದವಿದರನಿರುತ್ತೇನೆ. ನಾನು ಬದಾಮಿಯಲ್ಲಿ ನನ್ನ ತಂದೆ ತಾಯಿ ಮನೆಯಲ್ಲಿ ಇರುತ್ತೇನೆ. ನನ್ನ ವಿದ್ಯಾಭ್ಯಾಸ ಕೂಡ ಬದಾಮಿಯಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಮದುವೆ ದಿಃ 16-11-2016 ರಂದು ನಡೆದಿರುತ್ತದೆ. ನನ್ನ ಮದುವೆ ನಮ್ಮ ಕುಟುಂಬದವರು ಹಾಗೂ ನನ್ನ ಗಂಡನ ಕುಟುಂಬದವರು ಒಪ್ಪಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮದುವೆಯಾದ ದಿನದಂದು ಪ್ರತಿವಾದಿ ನಂ.4 ರವರ ಮದುವೆ ಕೂಡ ಒಂದೇ ದಿವಸ ಆಗಿರುತ್ತದೆ ಎಂದರೆ ಸರಿ. ನಮ್ಮ ಕುಟುಂಬಕ್ಕೂ ಹಾಗೂ ಪ್ರತಿವಾದಿಯರ ಕುಟುಂಬಕ್ಕೂ ಮೊದಲಿನಿಂದಲೂ ಯಾವುದೇ ಪರಿಚಯ ಇರಲಿಲ್ಲ ಮದುವೆ ಕಾಲಕ್ಕೆ ಮಾತುಕತೆ ಆಗಿ ಪರಿಚಯ ಇರುತ್ತದೆ ಎಂದರೆ ಸರಿ. ಮದುವೆಯಾದ ದಿನವೇ ನಾನು ನನ್ನ ಗಂಡನ ಮನೆಗೆ ಬಂದಿರುತ್ತೇನೆ. ಮದುವೆಯಾಗುವುದಕ್ಕಿಂತ ಮೊದಲು ಪ್ರತಿವಾದಿಯರ ಕುಟುಂಬದಲ್ಲಿ ಏನು ಆಗಿದೆ ಎಂದು ಮಾಹಿತಿ ಇಲ್ಲ ಎಂದರೆ ಸರಿ. ಮದುವೆಯಾದ ನಂತರದ ಮಾಹಿತಿ ಮಾತ್ರ ಇದೆ ಎಂದರೆ ಸರಿ. ಮದುವೆಯಾದ ನಂತರ ಎಷ್ಟು ದಿನಗಳವರೆಗೆ 1 ನೇ ಪ್ರತಿವಾದಿ ಕುಟುಂಬದಲ್ಲಿ ಇದ್ದೀರಿ ಎಂದರೆ ಸಾಕ್ಷಿ 8 ತಿಂಗಳು ಮಾತ್ರ ಎಂದು ನುಡಿಯುತ್ತಾರೆ. ಸದರಿ 8 ತಿಂಗಳ ಸಂಸಾರ ಸುಖವಾಗಿತ್ತು ಎಂದರೆ ಸರಿ. 8 ತಿಂಗಳ ನಂತರ ನಾನು ಮತ್ತೆ ನನ್ನ ಸಂಸಾರಕ್ಕೆ ಹೋಗಿಲ್ಲ ಎಂದರೆ ಸಾಕ್ಷಿ 10 ತಿಂಗಳು ಆದ ನಂತರ ಮತ್ತೆ ಹೋಗಿದ್ದೇನೆ ಎನ್ನುತ್ತಾರೆ. 6 ತಿಂಗಳು ಆದ ನಂತರ ಇವತ್ತಿನವರೆಗೂ ಮತ್ತೆ ಜಾಯನ್ ಆಗಿಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 2018 ಡಿಸೆಂಬರ ತಿಂಗಳಿನಲ್ಲಿ ನಾನು ಪ್ರತಿವಾದಿಯರ ಮನೆಗೆ ಹೋಗಿದ್ದೇನು. ಡಿಸೆಂಬರ 2018 ರಲ್ಲಿ ಪ್ರತಿವಾದಿಯರ ಮನೆಗೆ ಹೋಗಿದ್ದೆ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 2018 ರಿಂದ ಇಲ್ಲಿಯವರೆಗೂ ನಮಗಾಗಲೀ ಪ್ರತಿವಾದಿಗಾಗಲೀ ಮುಖಾಮುಖಿ ಭೇಟಿಯಾಗಿಲ್ಲ ಹಾಗೂ ಮಾತುಕತೆಯಾಗಿಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ದಾವೆಯನ್ನು ನನ್ನ ಗಂಡನ ಮನೆಯ ಆಸ್ತಿಯಲ್ಲಿ ನನಗೂ ಮತ್ತು ನನ್ನ ಮಗನಿಗೂ 1/6 ಹಿಸ್ಸೆ ಬೇಕೆಂದು ಸಲ್ಲಿಸಿರುತ್ತೇನೆ.

ಪ್ರತಿವಾದಿಯರ ಕುಟುಂಬಕ್ಕೆ ಬೆಳವಣಕಿ ಗ್ರಾಮದಲ್ಲಿ 416/1+2+3/ಬಿ ಆಸ್ತಿ ಇತ್ತು. ಇದನ್ನು ಮಾರಾಟ ಮಾಡಿಕೊಂಡು ಬಂದು ಹುಬ್ಬಳ್ಳಿಯಲ್ಲಿ ಆಸ್ತಿ ಹಿಡಿದಿರುತ್ತಾರೆಂದು ಸಾಕ್ಷಿ

ನುಡಿಯುತ್ತಾರೆ. ನಾನು ಮೇಲೆ ಹೇಳಿದ ಆಸ್ತಿ ಒಂದೇ ಪ್ರತಿವಾದಿಯರ ಮೂಲ ಮನೆತನದ ಆಸ್ತಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಆಸ್ತಿ ನನ್ನ ಮಾವನವರ ತಂದೆ ಬಸವಣ್ಣೆಪ್ಪ ಎನ್ನುವವರ ಆಸ್ತಿಯಾಗಿದ್ದು ಸದರಿ ಬಸವಣ್ಣೆಪ್ಪ ಇವರಿಗೆ ಅವರ ಪೂರ್ವಜರಿಂದ ಆಸ್ತಿ ಬಂದಿತ್ತು ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಬಸವಣ್ಣೆಪ್ಪ ಇವರಿಗೆ ಅವರ ಪೂರ್ವಜರಿಂದ ಬಂದಂತಹ ಆಸ್ತಿಯನ್ನು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿದಿದ್ದರಿಂದ ಸಾಕ್ಷಿಗೆ ತಾವು ಹಾಜರುಪಡಿಸಿರುವ ನಿಶಾನೆಗಳನ್ನು ತೋರಿಸಲಾಗಿ ಸಾಕ್ಷಿ ನಿಪಿ 8 ನ್ನು ನೋಡಿ ಅದರಲ್ಲಿ ಬಸವಣ್ಣೆಪ್ಪ ರವರ ಇವರ ಹೆಸರು ಇರುತ್ತದೆ ಎಂದು ನುಡಿದಿದ್ದು, ಸದರಿ ದಾಖಲೆಯಲ್ಲಿ ಬಸವಣ್ಣೆಪ್ಪ ಇವರ ಹೆಸರು ಇರುತ್ತದೆ ಆದರೆ ಅವರ ಪೂರ್ವಜರ ಹೆಸರು ಇಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮುಂದುವರೆದು 1949 ರಿಂದ ಆಸ್ತಿ ಬಂದ ಬಗ್ಗೆ ದಾಖಲೆ ಇದೆ ಎನ್ನುತ್ತಾರೆ. ನಾನು ಈಗ ತೋರಿಸಿದ ದಾಖಲೆಯಲ್ಲಿ ಇರುವ ಆಸ್ತಿ 416/2 ಬ 3 ಎಕರೆ 17 ಗುಂಟೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ನನ್ನ ದಾವಾದಲ್ಲಿ ಸರ್ವೆ ನಂ 416 ಆಸ್ತಿ ಮೂಲತಃ ಪ್ರತಿವಾದಿಯರ ಕುಟುಂಬಕ್ಕೆ ಬಂದಂತಹ ಒಂದೇ ಆಸ್ತಿ ಎಂದು ಬರೆಸಿರುತ್ತೇನೆ ಎಂದರೆ ಸರಿ. ನನ್ನ ಮಾವನವರಿಗೆ ಅಣ್ಣತಮ್ಮಂದಿರು ಇದ್ದರು ಎಂದರೆ ಸರಿ. ಅವರ ನಡುವೆ ವಾಟ್ನಿ ಆಗಿದೀಯಾ ಎಂದರೆ ಸಾಕ್ಷಿ ಆಗಿದೆ ಎನ್ನುತ್ತಾರೆ. ನನ್ನ ಮಾವನವರ ಅಣ್ಣತಮ್ಮಂದರಿಗೆ ಇದರಲ್ಲಿ ಪಾಲು ಬಂದಿದಿಯಾ ಎಂದರೆ ಸಾಕ್ಷಿ ಅವರಿಗೆ ಬೇರೆ ಆಸ್ತಿ ಬಂದಿದೆ ಇದರಲ್ಲಿ ಬಂದಿಲ್ಲ ಎನ್ನುತ್ತಾರೆ. ನಮ್ಮ ಮನೆತನಕ್ಕೆ ಇರುವುದು ಒಂದೇ ಆಸ್ತಿ ಎಂದು ಹೇಳಿದ್ದು ಅವರು ಭಾಗ ಮಾಡಿಕೊಂಡಿದ್ದಾರೆ ಆದರೆ ಅವರಿಗೆ ಬೇರೆ ಆಸ್ತಿ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನಿಜ ಎನ್ನುತ್ತಾರೆ. ನನ್ನ ಪ್ರಕಾರ ಸರ್ವೆ ನಂ 416 ನನ್ನ ಮಾವನವರಿಗೆ ಅಷ್ಟೆ ಬಂದಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅವರು ಆಸ್ತಿ ಹಂಚಿಕೊಂಡ ನಂತರ ಅವರು ಕುಟುಂಬಗಳು ಬೇರೆ ಬೇರೆ ಇರುತ್ತವೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಂದರೆ ನಿಮ್ಮ ಪ್ರಕಾರ ಅವರು ಕೂಡಿಯೇ ಇದ್ದಾರಾ ಎಂದರೆ ಸಾಕ್ಷಿ ಅವರು ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಾವನವರ ಅಣ್ಣತಮ್ಮಂದಿರು ಇದ್ದಾರೋ ಇಲ್ಲವೋ ಎಂಬ ಬಗ್ಗೆ ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಾವನವರು ತಮ್ಮ ಜೀವಿತಾವಧಿಯಲ್ಲಿ ಬಿ ಎಸ್ ಎನ ಎಲ್ ನಲ್ಲಿ ಕೆಲಸ ಮಾಡುತ್ತಿದ್ದರು. ಸದರಿಯವರು ಜೂನಿಯರ ಟೆಲಿಕಾಮ ಎಂಬುದಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನುತ್ತಾರೆ. ಅವರಿಗೆ ಎಷ್ಟು ಆದಾಯ ಮೂಲಗಳು ಇದ್ದವು ಎಂಬ ಬಗ್ಗೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಅವರ ಜೀವಿತಾವಧಿಯಲ್ಲಿ ಅವರು ಎಲ್ಲೆಲ್ಲಿ ಸಾಲ ತೆಗೆದುಕೊಂಡಿದ್ದರು ಮತ್ತು ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು ಎಂಬ ಬಗ್ಗೆ ಮಾಹಿತಿ ಇದೀಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿ 30-01-2009 ರಲ್ಲಿ ನನ್ನ ಮಾವನರಿಗೆ ಓಪನ ಸ್ಕಲ ಸರ್ಜರಿ ಆಗಿದೆ ಎಂಬ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಹೇಳಿರುತ್ತಾರೆಂದು ನುಡಿಯುತ್ತಾರೆ. ಸದರಿ ಸರ್ಜರಿಯಾದ

ನಂತರ ಅವರಿಗೆ ಅವರು ಸಾಯುವರೆಗೂ ಐಸಿಯು ನಲ್ಲಿ ಚಿಕಿತ್ಸೆ ನಡೆದಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಆ ನಂತರ ಪ್ರತಿವಾದಿಯರು ತನ್ನ ತಂದೆಯ ಚಿಕಿತ್ಸೆಗಾಗಿ ಸುಮಾರು 18-20 ಲಕ್ಷ ರೂ ಖರ್ಚು ಮಾಡಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಚಾರಗಳು ಮದುವೆಯಾಗುವುದಕ್ಕಿಂತ ಮುಂಚಿನ ವ್ಯವಹಾರಗಳು ಆದ ಕಾರಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮದುವೆಗಿಂತ ಪೂರ್ವದಲ್ಲಿ ಪ್ರತಿವಾದಿಯರ ಕುಟುಂಬದಲ್ಲಿ ಆದ ಆರ್ಥಿಕ ವ್ಯವಹಾರಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಇಲ್ಲ ಎನುತ್ತಾರೆ. ನಾನು ಸರ್ವೆ ನಂ.416 ರ ಆಸ್ತಿ ನನ್ನ ಮಾವನರ ಕುಟುಂಬಕ್ಕೆ ಇತ್ತು ಎಂದು ಹೇಳಿದ್ದು ಆ ಆಸ್ತಿಯನ್ನು ನನ್ನ ಮಾವನವರು ತಾವು ಜೀವಂತ ಇದ್ದಾಗಲೇ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಆಸ್ತಿಯನ್ನು ತಮ್ಮ ಕುಟುಂಬದ ಅವಶ್ಯಕತೆಗಾಗಿ ಆರೋಗ್ಯದ ಕಾರಣಕ್ಕಾಗಿ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನು ನನ್ನ ಮಾವನವರು ಕುಟುಂಬದ ಅವಶ್ಯಕತೆಗಾಗಿ ಮತ್ತು ಆರೋಗ್ಯದ ಕಾರಣಕ್ಕಾಗಿ ಮಾರಾಟ ಮಾಡಿದ್ದರು ಕೂಡ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಚಕಬಂದಿ ಹೇಳಲು ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪ್ಲಾಟ ನಂ. 114 ಇದು ನಮ್ಮ ಮಾವನವರು ಖರೀದಿ ಹಿಡಿದ ಆಸ್ತಿ ಎಂದರೆ ಸಾಕ್ಷಿ ಖರೀದಿ ಹಿಡಿದ ಆಸ್ತಿ ಎನ್ನುತ್ತಾರೆ. ಸದರಿ ಆಸ್ತಿಯನ್ನು ಎಷ್ಟು ಹಣ ಕೊಟ್ಟು ಖರೀದಿ ಹಿಡಿದಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನು ನಿಪಿ 37 ರಂತೆ ಕಾರ್ಪೊರೇಷನ ಬ್ಯಾಂಕನಲ್ಲಿ 3,85,000 ರೂ ಗಳ ಸಾಲ ಪಡೆದು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2001 ರಿಂದ 2008 ವರೆಗೂ ನನ್ನ ಮಾವನವರಿಗೆ ಯಾವ ಯಾವ ಆದಾಯದ ಮೂಲಗಳು ಇದ್ದವು ಎಂದು ಗೊತ್ತಿದೀಯಾ ಇಲ್ಲ ಎನ್ನುತ್ತಾರೆ. ನನ್ನ ಮಾವನವರು ತಮ್ಮ ನೌಕರಿಯಲ್ಲಿದ್ದು ಆ ನೌಕರಿಯ ಆದಾರದ ಮೇಲೆ ಸಾಲ ತೆಗೆದು ಈ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಆಸ್ತಿಯನ್ನು ಯಾವ ಕಾರಣಕ್ಕೆ ಮಾರಿದ್ದರು ಎಂದು ಗೊತ್ತಿದಿಯಾ ಎಂದರೆ ಸಾಕ್ಷಿ ಮನೆ ಕಟ್ಟುವ ಸಲುವಾಗಿ ಮತ್ತು ಗಾಮನಗಟ್ಟಿಯಲ್ಲಿ ಒಂದು ಸೈಟ ಹಿಡಿಯುವ ಸಲುವಾಗಿ ಮತ್ತು ಅಪಾರ್ಟಮೆಂಟನಲ್ಲಿ ಒಂದು ಮನೆ ಕೊಳ್ಳುವ ಸಲುವಾಗಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ನನ್ನ ಪ್ರಕಾರ ಈ ಮೂರು ಆಸ್ತಿಗಳನ್ನು ನಿಮ್ಮ ಮಾವನವರೇ ಹಿಡಿದಿದ್ದಾರೆಂದು ಹೇಳುತ್ತೀರಾ ಎಂದರೆ ಸಾಕ್ಷಿ ಕೌಟುಂಬಿಕ ಆದಾಯದಿಂದ ಅವುಗಳನ್ನು ಖರೀದಿ ಹಿಡಿದಿದ್ದಾರೆಂದು ನುಡಿಯುತ್ತಾರೆ. ಈ ಬಗ್ಗೆ ಯಾವುದಾದರೂ ಕಾಗದ ಪತ್ರ ಹಾಜರುಪಡಿಸಿದ್ದೀರಾ ಎಂದರೆ ನಾನು ಮದುವೆಯಾಗಿ ಅಲ್ಲಿಗೆ ಹೋದಾಗ ಅವರೇ ನನಗೆ ಈ ವಿಚಾರ ಹೇಳಿರುತ್ತಾರೆಂದು ನುಡಿಯುತ್ತಾರೆ. ನನ್ನ ಪ್ರಕಾರ ನನ್ನ ಮಾವನವರು ನಾನು ಮದುವೆಯಾಗುವುಕ್ಕಿಂತ ಮೊದಲೇ ಮರಣ ಹೊಂದಿರುತ್ತಾರೆಂದರೆ ಸರಿ.

ಪ್ಲಾಟ ನಂ. 110 ಪ್ರತಿವಾದಿ ನಂ. 2 ರವರು ಖರೀದಿ ಮಾಡಿದ್ದು ಅವರ ಹೆಸರಿನಲ್ಲಿಯೇ ಇದೇ ಎಂದರೆ ಸರಿ. ಸದರಿ ಆಸ್ತಿಯನ್ನು ಯಾರಿಂದ ಎಷ್ಟು ಹಣ ಕೊಟ್ಟು ಖರೀದಿ ಹಿಡಿದಿರುತ್ತಾರೆಂಬ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ಲಾಟ ನಂ. 110 ಇದು ಕೂಡ ನನ್ನ ಮದುವೆಗೆ ಮೊದಲೇ ಖರೀದಿ ಹಿಡಿದಂತಹ ಆಸ್ತಿ ಎಂದರೆ ಸರಿ.

ಪ್ಲಾಟ ನಂ. 001 ಈ ಆಸ್ತಿ ಪ್ರತಿವಾದಿ ನಂ. 1 ರವರು ಖರೀದಿ ಮಾಡಿದಂತಹ ಆಸ್ತಿ ಎಂದರೆ ಸಾಕ್ಷಿ ಕೌಟುಂಬಿಕ ಆದಾಯದಿಂದಲೇ ಅದನ್ನು ಖರೀದಿ ಹಿಡಿದಿರುತ್ತಾರೆಂದು ನುಡಿಯುತ್ತಾರೆ. ಕೌಟುಂಬಿಕ ಆದಾಯ ಎಂದು ಹೇಳಿದ್ದು ಯಾರು ಎಷ್ಟು ಹಣ ಕೊಟ್ಟಿರುತ್ತಾರಂದು ಮಾಹಿತಿ ಇದಿಯಾ ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ ನಂ. 1 ರವರು ನೌಕರಿ ಮಾಡಿರುತ್ತಾರೆಂದರೆ ಸಾಕ್ಷಿ ಅವರು ಹೊಟೇಲನಲ್ಲಿ ಕೆಲಸ ಮಾಡುತ್ತಾರೆ ಅವರಿಗೆ 8 ಸಾವಿರ ರೂ ಪಗಾರ ಇದೆ ಎನ್ನುತ್ತಾರೆ. ಅವರು ಯಾವಾಗಿನಿಂದ ಹೊಟೇಲನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಹೊಟೇಲನಲ್ಲಿ 1 ನೇ ಪ್ರತಿವಾದಿ ಕೆಲಸ ಮಾಡುತ್ತಿದ್ದಾರೆ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ನಾನು ಬರೆಸಿಲ್ಲ ಅಂದರೆ ನಿಮ್ಮ ಯಜಮಾನರು ಬರೆಸಿದ್ದಾರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಮ್ಮ ಪ್ರಕಾರ 8 ಸಾವಿರ ರೂ ಆದಾಯ ಎಲ್ಲಿಂದ ಎಲ್ಲಿಯವರೆಗೆ 1 ನೇ ಪ್ರತಿವಾದಿಗೆ ಇತ್ತು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

ನಿಪಿ 40 ಪ್ರಕಾರ ಪ್ಲಾಟ ನಂ 001 ಆಸ್ತಿಯನ್ನು ಬ್ಯಾಂಕಿನಿಂದ ಸಾಲ ಪಡೆದು ಖರೀದಿಸಲಾಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಆಸ್ತಿಯ ಮೇಲೆ ತೆಗೆದ ಸಾಲ ಇನ್ನೂ ಬಾಕಿ ಇದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

(ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.